ಊ) ರಾಜ್ಯದಲ್ಲಿ ಐಐಟಿ ಸ್ಥಾಪನೆಗೆ ಸರ್ಕಾರವು ರಾಯಚೂರು, ಧಾರವಾಡ ಮತ್ತು ಮೈಸೂರು ಜಿಲ್ಲೆಗಳನ್ನು ಗುರುತಿಸಿರುತ್ತದೆ.

ಋ) ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ಒಂದಾದ ರಾಯಚೂರು ಜಿಲ್ಲೆಯು ಸಹ ಸರ್ಕಾರ ಗುರುತಿಸಿರುವ 3 ಜಿಲ್ಲೆಗಳಲ್ಲಿ ಒಂದು ಜಿಲ್ಲೆಯಾಗಿದೆ.

ವಿವಿಧ ವಿಶ್ವವಿದ್ಯಾಲಯಗಳ ಮುಖ್ಯಸ್ಥರುಗಳು ಎದುರಿಸುತ್ತಿರುವ ವಿಚಾರಣೆಗಳು

2486(3079); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ

ಅ) ರಾಜ್ಯದ ಯಾವ್ಯಾವ ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಉಪಕುಲಪತಿಗಳು, ರಿಜಿಸ್ಟ್ರಾರ್ ಮತ್ತು ಇತರೆ ಅಧಿಕಾರಿಗಳ–ವಿರುದ್ಧ ಹಣ ಮತ್ತು ಅಧಿಕಾರದ ದುರುಪಯೋಗ ಮತ್ತು ಇತರೆ ಆರೋಪಗಳು ಕೇಳಿ ಬಂದಿದೆ; ಇವುಗಳ ಹೆಸರಿನೊಂದಿಗೆ ವಿವರ ನೀಡುವುದು;

ಆ) ಇವರುಗಳ ಮೇಲಿರುವ ಆರೋಪಗಳ ಪೂರ್ಣ ವಿವರಗಳೇನು (ಅಧಿಕಾರಿಗಳವಾರು ಪೂರ್ಣ ವಿವರ ಒದಗಿಸುವುದು);

ಇ) ಈ ಬಗ್ಗೆ ಎಷ್ಟು ಅಧಿಕಾರಿಗಳ ವಿರುದ್ಧ ವಿಚಾರಣೆಗೆ ಆದೇಶವಾಗಿದೆ ಹಾಗೂ ಎಷ್ಟು ಅಧಿಕಾರಿಗಳ ವಿಚಾರಣೆ ಪ್ರಗತಿಯಲ್ಲಿದೆ; ಮತ್ತು ಅಧಿಕಾರಿಗಳ ವಿಚಾರಣೆ ಪೂರ್ಣಗೊಂಡು ವರದಿ ಸಲ್ಲಿಕೆಯಾಗಿದೆ; ಯಾರ ಯಾರ ಮೇಲಿನ ಆರೋಪಗಳು ದೃಢಪಟ್ಟಿವೆ; ಈ ವರದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು);

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ), ಆ) ಮತ್ತು ಇ) ಬಂದಿದೆ, ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1. ಡಾ: ಆರ್.ಕೆ. ಸೋಮಶೇಖರ್, ಕುಲಸಚಿವರು (ಮೌಲ್ಯಮಾಪನ) ಬೆಂಗಳೂರು ವಿಶ್ವವಿದ್ಯಾಲಯ ಇವರ ವಿರುದ್ಧ ವಿಶ್ವವಿದ್ಯಾಲಯಕ್ಕೆ ಬರಬೇಕಾದ ಹಣವನ್ನು ತಮ್ಮ ಸ್ವಂತ ಖಾತೆಗೆ ಜಮ ಮಾಡಿ ಆರ್ಥಿಕ ನಷ್ಟವನ್ನುಂಟು ಮಾಡಿರುವುದು, ಬ್ಲಾಕ್‌ಲಿಸ್ಟ್‌ನಲ್ಲಿದ್ದ ಕಾಲೇಜುಗಳಿಗೆ ಪರೀಕ್ಷಾ ಕೇಂದ್ರ ನೀಡಿರುವುದು, ಬ್ಲಾಕ್‌ಲಿಸ್ಟ್‌ನಲ್ಲಿರುವ ಉಪನ್ಯಾಸಕರುಗಳನ್ನು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಿರುವುದು, ಎಂಟು ಪರೀಕ್ಷಾ ಕಸ್ಟೋಡಿಯನ್ ನೇಮಕಾತಿ ಮಾಡುವ ಬದಲು 23 ಪರೀಕ್ಷಾ ಕಸ್ಟೋಡಿಯನ್‌ಗಳನ್ನು ನೇಮಕಾತಿ ಮಾಡಿ ಅವ್ಯವಹಾರಗಳನ್ನು ಮಾಡಿರುವುದು ಮುಂತಾದ ಹಲವಾರು ಆರೋಪಗಳ ಕುರಿತಂತೆ ತನಿಖೆ ನಡೆಸಲು ಶ್ರೀ ವಸಂತ್ ಹೆಚ್ ಮುಳಸಾವಳಗಿ, ನಿವೃತ್ತ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿದೆ. ತನಿಖಾ ವರದಿಯನ್ನು ನಿರೀಕ್ಷಿಸಲಾಗಿದೆ.

2. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಬಿ.ಆರ್. ಅನಂತನ್‌ರವರ ಅವಧಿಯಲ್ಲಿ ನೇಮಕಾತಿಗಳಲ್ಲಿ ಅಕ್ರಮ ನಡೆದಿದೆ ಎಂಬ ಪತ್ರಿಕಾ ವರದಿಗಳನ್ನಾಧರಿಸಿ, ಮಾನ್ಯ ರಾಜ್ಯಪಾಲರು ನಿವೃತ್ತ ನ್ಯಾಯಮೂರ್ತಿಗಳಾದ ಡಾ: ಪದ್ಮರಾಜ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದರು. ಸದರಿ ತನಿಖೆಗೆ ವಿಶ್ರಾಂತ ಕುಲಪತಿಗಳಾದ ಪ್ರೊ. ಬಿ.ಆರ್. ಅನಂತನ್‌ರವರು ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುತ್ತಾರೆ. ನಂತರ ರಾಜ್ಯ ಸರ್ಕಾರವು ಡಾ: ಫರೂಕ್, ನಿವೃತ್ತ ನ್ಯಾಯಾಮೂರ್ತಿಗಳ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಸಮಿತಿಯನ್ನು ರಚಿಸಿರುತ್ತಾರೆ. ಪ್ರಸ್ತುತ ಪ್ರಕರಣವು ವಿಚಾರಣಾ ಹಂತದಲ್ಲಿದೆ.

3. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ವ್ಯವಹಾರಗಳ ಬಗ್ಗೆ ಮಾನ್ಯ ರಾಜ್ಯಪಾಲರ ಸಚಿವಾಲಯದ ದಿನಾಂಕ 19–12–2014ರನ್ವಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಅಜೀತ್ ಜೆ. ಗುಂಜಾಲ್, ಬೆಂಗಳೂರು ಇವರ ನೇತೃತ್ವದಲ್ಲಿ ಏಕ ಸದಸ್ಯ ಸತ್ಯ ಶೋಧನಾ ಸಮಿತಿಯನ್ನು ಮಾನ್ಯ ರಾಜ್ಯಪಾಲರು ರಚಿಸಿರುತ್ತಾರೆ. ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

4. ಪ್ರೊ. ಕೆ.ಎಸ್. ರಂಗಪ್ಪ ಇವರು ಕರಾಮುವಿಯ ಕುಲಪತಿಗಳಾಗಿದ್ದ ಅವಧಿಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಕಟ್ಟಡ ನಿರ್ಮಾಣದ ಟೆಂಡರ್ ನೀಡಲು ಮತ್ತು ಸಾಮಗ್ರಿಗಳ ಖರೀದಿಯಲ್ಲಿ ಕೆಟಿಟಿಪಿ ನಿಯಮವನ್ನು ಉಲ್ಲಂಘಿಸಿ, ಎಂಹೆಚ್ಆರ್‌ಡಿ, ಡಿಇಸಿ, ಯುಜಿಸಿ ಮತ್ತು ಎಐಸಿಟಿಇ ಈ ಪ್ರಾಧಿಕಾರಗಳ ಅನುಮೋದನೆ ಪಡೆಯದೆ ವಿವಿಧ ಖಾಸಗಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಬಗ್ಗೆ ಹಾಗೂ ಸರ್ಕಾರದ ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿ 170ಕ್ಕಿಂತ ಹೆಚ್ಚು ವಿವಿಧ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ಮಾನ್ಯ ರಾಜ್ಯಪಾಲರು ನಿವೃತ್ತಿ ನ್ಯಾಯಮೂರ್ತಿಗಳಾದ ಶ್ರೀ ಭಕ್ತವತ್ಸಲ ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಸತ್ಯ ಶೋಧನಾ ಸಮಿತಿಯನ್ನು ನೇಮಕ ಮಾಡಲಾಗಿದೆ.

5. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನಕಲಿ ಅಂಕಪಟ್ಟಿ ಹಗರಣಕ್ಕೆ ಸಂಬಂಧಿಸಿದಂತೆ, ಜಸ್ಟೀಸ್ ಭಕ್ತವತ್ಸಲ ಏಕ ಸದಸ್ಯ ಸಮಿತಿಯು ನೀಡಿರುವ ವರದಿಯನ್ವಯ ಈ ಕೆಳಕಂಡ ನೌಕರರುಗಳನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ; ಮತ್ತು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಸದರಿಯವರನ್ನು ಅಮಾನತ್ತಿನಲ್ಲಿರಿಸಲಾಗಿದೆ.

1. ಶ್ರೀ ಹೆಚ್.ಎಲ್. ವಿಶ್ವನಾಥ್, ಉಪ ಕುಲಸಚಿವರ (ಆಡಳಿತ)
2. ಶ್ರೀಮತಿ ಉಮಾ ಎ.ವಿ. ಉಪ ಕುಲಸಚಿವೆ
3. ಶ್ರೀ ಸೋಮಶೇಖರಯ್ಯ, ಸಹಾಯಕ ಕುಲಸಚಿವ
4. ಶ್ರೀ ಟಿ.ಸಿ. ಚಂದನ್, ಪ್ರದ, ಗುಮಾಸ್ತ
5. ಶ್ರೀಮತಿ ಕಲ್ಯಾಣಿ (ದಿನಗೂಲಿ ನೌಕರ) ವಜಾಗೊಳಿಸಲಾಗಿದೆ.
6. ಶ್ರೀ ರಾಜೇಶ್ ಆರ್. ದಿನಗೂಲಿ ನೌಕರ ವಜಾಗೊಳಿಸಲಾಗಿದೆ.

6. ಡಾ: ಸಯಿದಾ ಅಖ್ತರ್, ನಿವೃತ್ತ ಕುಲಪತಿಗಳು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಇವರು ಸದರಿ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿದ್ದ ಅವಧಿಯಲ್ಲಿ ಹಣದ ದುರುಪಯೋಗವಾಗಿರುವ ಬಗ್ಗೆ ವರದಿಯಾಗಿದ್ದು, ಸದರಿ ಪ್ರಕರಣ ಕುರಿತಂತೆ ವಿಚಾರಣೆ ನಡೆಸಲು ನ್ಯಾಯಮೂರ್ತಿ ಎಂ.ಪಿ. ಚಿನ್ನಪ್ಪ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ವರದಿ ನೀಡಿದ್ದು, ಅದರನ್ವಯ ಡಾ: ಸಯಿದಾ ಅಖ್ತರ್‌ರವರು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ ಇಲ್ಲಿ ಸೇವೆಯಲ್ಲಿರುವ ಸಮಯದಲ್ಲಿ ಹೆಚ್ಚುವರಿಯಾಗಿ ಪಡೆದ ರೂ. **10,87,644.00**ಲಕ್ಷ (ಹತ್ತು ಲಕ್ಷದ ಎಂಬತ್ತೇಳು ಸಾವಿರದ ಆರು ನೂರ ನಲವತ್ತನಾಲ್ಕು ರೂಪಾಯಿ)ಗಳು ಮತ್ತು 8% ಬಡ್ಡಿ ಸೇರಿ ಒಟ್ಟು ರೂ. 17,05,262.00ಲಕ್ಷ(ಹದಿನೇಳು ಲಕ್ಷದ ಐದು ಸಾವಿರದ ಇನ್ನೂರ ಅರವತ್ತೆರಡು ರೂಪಾಯಿ)ಗಳನ್ನು ವಿಶ್ವವಿದ್ಯಾಲಯವು ನೇಮಿಸಿದ ಸಮಿತಿಗಳ ಶಿಫಾರಸ್ಸಿನಂತೆ ಗುಲ್ಬರ್ಗ ವಿಶ್ವವಿದ್ಯಾಲಯವು ವಸೂಲು

ಮಾಡಿ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ನೀಡುವಂತೆ ತಿಳಿಸಲಾಗಿದೆ.

7. ಪ್ರೊ. ಶೇರಿಗಾರ್, ನಿವೃತ್ತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ ಇವರ ಅಧಿಕಾರಾವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ನೇಮಕಾತಿ ಮತ್ತು ಅಧಿಕಾರ ದುರುಪಯೋಗದ ಕುರಿತು ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಹೆಚ್. ರಂಗವಿಠ್ಠಲಾಚಾರ್‌ರವರ ನೇತೃತ್ವದಲ್ಲಿ ಸತ್ಯ ಶೋಧನಾ ಸಮಿತಿಯನ್ನು ರಚಿಸಲಾಗಿದೆ. ಈ ಬಗ್ಗೆ ನಿವೃತ್ತ ಕುಲಪತಿಗಳು ಮಾನ್ಯ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿದ್ದಾರೆ.

8. ಪ್ರೊ. ಮಂಜಪ್ಪ ಡಿ. ಹೊಸಮನಿ, ನಿವೃತ್ತ ಕುಲಪತಿಗಳು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇವರ ವಿರುದ್ಧ ಹಲವಾರು ಅವ್ಯವಹಾರಗಳ ಕುರಿತಂತೆ ದೂರುಗಳು ಸ್ವೀಕೃತವಾಗಿದ್ದು, ಸದರಿ ದೂರುಗಳನ್ನು ಪರಿಶೀಲಿಸಿ, ಸರ್ಕಾರವು ಶ್ರೀ ಎ.ಎಂ. ಫರೂಕ್, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಪ್ರಸ್ತುತ ಪ್ರಕರಣವು ಪ್ರಗತಿಯ ಹಂತದಲ್ಲಿದೆ.

9. ಪ್ರೊ. ಬಿ.ಬಿ. ವಾಲೀಕರ್, ನಿವೃತ್ತ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರ ವಿರುದ್ಧ ಸ್ವೀಕೃತವಾಗಿರುವ ಭ್ರಷ್ಟಾಚಾರ ದೂರುಗಳ ಮೇಲೆ ತನಿಖೆ ನಡೆಸಲು ಮಾನ್ಯ ಕುಲಾದಿಪತಿಗಳು ಜಸ್ಟೀಸ್ ಪದ್ಮರಾಜ ಆಯೋಗವನ್ನು ರಚಿಸಿದ್ದು, ಸದರಿ ಆಯೋಗದ ವಿರುದ್ಧ ಸದರಿಯವರು ಮಾನ್ಯ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ಇಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಆಯೋಗವನ್ನು ರದ್ದುಪಡಿಸಲಾಗಿದೆ. ಈ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲನ್ನು ದಾಖಲಿಸಲಾಗಿದ್ದು, ತೀರ್ಪನ್ನು ನಿರೀಕ್ಷಿಸಲಾಗಿದೆ.

10. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ಕುಲಸಚಿವರಾಗಿದ್ದ ಪ್ರೊ.ಚಂದ್ರಮಾ ಎಸ್. ಕಣಗಲಿ ಇವರ ವಿರುದ್ಧ ಎಂ.ಫಿಲ್. ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತಡವಾಗಿ ಸಲ್ಲಿಸಿದ ಬಗ್ಗೆ ದೂರುಗಳು ಸ್ವೀಕೃತವಾಗಿದ್ದು, ಈ ಬಗ್ಗೆ ನಿಯಮಾನುಸಾರ ತನಿಖೆ ನಡೆಸುವಂತೆ ವಿಶ್ವವಿದ್ಯಾಲಯಕ್ಕೆ ತಿಳಿಸಲಾಗಿದೆ.

11. ಶ್ರೀ ಎಸ್. ಉದಯಕುಮಾರ್, ಐ.ಎಫ್.ಎಸ್., ಹಿಂದಿನ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ ಇವರ ವಿರುದ್ಧ ತುಂಡುಗುತ್ತಿಗೆ ವಿಷಯದಲ್ಲಿ ಲೋಕಾಯುಕ್ತವು ವರದಿ ಸಲ್ಲಿಸಿದ್ದು, ಸದರಿ ವರದಿಯ ಮೇಲೆ ಕ್ರಮವಹಿಸಲಾಗಿತ್ತಿದೆ.

ವಸತಿ ಯೋಜನೆಯ ಅನುಷ್ಠಾನ

2487(3080); ಡಾ ಗುರುಪಾದಪ್ಪ ನಾಗಮಾರಪಳ್ಳಿ

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಿ ಹಂಚಿರುವ ಮನೆಗಳು ಮತ್ತು ನಿವೇಶನಗಳ ಸಂಖ್ಯೆ ಎಷ್ಟು (ವಿಧಾನಸಭಾವಾರು ಕ್ಷೇತ್ರವಾರು ಅಂಕಿ ಅಂಶಗಳ ವಿವರ ಒದಗಿಸುವುದು)

ಆ) ಈ ಅವಧಿಯಲ್ಲಿ ಎಷ್ಟು ಮನೆಗಳ ನಿರ್ಮಾಣ ಮತ್ತು ನಿವೇಶನಗಳ ಹಂಚಿಕೆಯ ಗುರಿಯನ್ನು ಹೊಂದಲಾಗಿತ್ತು. ಈ ಗುರಿಯನ್ನು ಸಾಧಿಸಲಾಗಿದೆಯೇ;

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈ ಯೋಜನೆಗೆ ಎಷ್ಟು ಮೊತ್ತದ ಹಣವನ್ನು ಖರ್ಚು ಮಾಡಿವೆ (ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳ ವಿವರ ಒದಗಿಸುವುದು)